(ಸಾಕ್ಷಿಗೆ ದಿನಾಂಕ: 22.06.2024 ರಂದು ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಸಿ.ಕೆ.ಆರ್., ಅರ್ಜಿದಾರರ ಪರ ವಕೀಲರಿಂದಃ</u>**

ನನ್ನ ಮುಂದುವರೆದ ಮುಖ್ಯ ವಿಚಾರಣೆಯಾಗಿ ಮಧ್ಯಂತರ ಅರ್ಜಿಯೊಂದಿಗೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು, ದಿನಾಂಕಃ 10.12.2020 ರ ನೋಂದಾಯಿತ ಕ್ರಯಪತ್ರದ ಡಿಜಿಟಲ್ ನಕಲನ್ನು ನಿ.ಪಿ.1 ಎಂದು, ಹಕ್ಕು ಬದಲಾವಣೆ ವಹಿಯ ದೃಢೀಕೃತ ನಕಲನ್ನು ನಿ.ಪಿ.2 ಎಂದು, ಕುಣಿಗಲ್ ಹಿರಿಯ ಸಿವಿಲ್ ನ್ಯಾಯಾಲಯ ಮೂಲ ದಾವೆ ಸಂಖ್ಯೆ 17/2014 ರಲ್ಲಿ ಮಧ್ಯಂತರ ಅರ್ಜಿ-1 ರ ಮೇಲೆ ದಿನಾಂಕಃ 03.03.2016 ರಂದು ಹೊರಡಿಸಿದ ಆದೇಶದ ದೃಢೀಕೃತ ನಕಲನ್ನು ನಿ.ಪಿ.3 ಎಂದು, ದಿನಾಂಕಃ 31.03.2021 ರ ನೋಂದಾಯಿತ ಕ್ರಯಪತ್ರದ ಡಿಜಿಟಲ್ ನಕಲನ್ನು ನಿ.ಪಿ.4 ಎಂದು ಮತ್ತು ರಾಯಗೋನಹಳ್ಳಿ ಗ್ರಾಮದ ಸರ್ವೆ ನಂಬರ್ 42/7 ಸ್ವತ್ತಿನ ಪಹಣಿ ಪತ್ರಿಕೆಯನ್ನು ನಿ.ಪಿ.5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ ಕೆ.ಜಿ.ಸಿ., ಎದುರುದಾರರ ಪರ ವಕೀಲರಿಂದಃ</u>**

ಸಮಯಾವಕಾಶವನ್ನು ಕೇಳಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.